ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 280 ಯುಎನ್‌ಇ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08-09-2016.

**ಸುತ್ತೋಲೆ**

ಸರ್ಕಾರದ ಆದೇಶ ಸಂಖ್ಯೆ ಇಡಿ 37 ಯುಎನ್‌ಇ 2009 ದಿನಾಂಕ 24-12-2009ರನ್ವಯ ರಾಜ್ಯದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಉಪನ್ಯಾಸಕರು, ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಗ್ರಂಥಪಾಲಕರಿಗೆ ಯುಜಿಸಿಯ ಪರಿಷ್ಕೃತ 6ನೇ ವೇತನವನ್ನು ಜಾರಿಗೊಳಿಸಲಾಗಿತ್ತು. ಸದರಿ ಆದೇಶದಲ್ಲಿ, ಯುಜಿಸಿಯ ಪರಿನಿಯಮಾವಳಿ UGC Minimum Standards and procedure for Award of Ph.D. Degree Regulations, 2009 ರನ್ವಯ ಪಿ.ಹೆಚ್.ಡಿ.ಯನ್ನು ಪಡೆದ ಅಭ್ಯರ್ಥಿಗಳಿಗೆ ನೆಟ್, ಸ್ಲೆಟ್,ಮತ್ತು ಸೆಟ್ ಇವುಗಳಿಂದ ವಿನಾಯಿತಿಯನ್ನು ನೀಡಲಾಗಿದೆ. ಯುಜಿಸಿಯ ಪರಿನಿಯಮಾವಳಿ 2009ರಲ್ಲಿ ಕೋರ್ಸ್‌ವರ್ಕ್‌ನೊಂದಿಗೆ ಪೂರೈಸಿದ್ದಲ್ಲಿ ಮಾತ್ರ ಪಿ.ಹೆಚ್.ಡಿ. ಪದವಿಯನ್ನು ಪರಿಗಣಿಸಲಾಗುತ್ತಿದೆ. ನಂತರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಬೋಧಕ ಸಿಬ್ಬಂಧಿಗಳ ನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆಗಾಗಿ ಯುಜಿಸಿಯ ಪರಿನಿಯಮಾವಳಿ 2010ಅನ್ನು ಹೊರಡಿಸಲಾಗಿದೆ. ಸದರಿ ಪರಿನಿಯಮಾವಳಿಯಲ್ಲಿಯೂ ಸಹ UGC Minimum Standards and procedure for Award of Ph.D. Degree Regulations, 2009 ರನ್ವಯ ಕೋರ್ಸ್‌ವರ್ಕ್‌ನೊಂದಿಗೆ ಪೂರೈಸಿ ಪಿ.ಹೆಚ್.ಡಿ.ಯನ್ನು ಪಡೆದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ನೆಟ್, ಸ್ಲೆಟ್,ಮತ್ತು ಸೆಟ್ ಇವುಗಳಿಂದ ವಿನಾಯಿತಿಯನ್ನು ನೀಡಲಾಗಿದೆ.

ದಿನಾಂಕ: 10-05-2016ರಂದು ಭಾರತ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಯುಜಿಸಿ ಅಧಿಸೂಚನೆ ದಿನಾಂಕ:04-05-2016ರಲ್ಲಿ ಯುಜಿಸಿ ಪರಿನಿಯಮಾವಳಿ 2010ಕ್ಕೆ ಕೆಲವೊಂದು ತಿದ್ದುಪಡಿ ಮಾಡಲಾಗಿದೆ. ಸದರಿ ತಿದ್ದಪಡಿಯು ಈ ಕೆಳಕಂಡಂತಿದೆ.

"the award of degree to candidate registered for the M. Phil / Ph. D. programme prior to July 11,2009, shall be governed by the provisions of the then existing Ordinances/By laws/Regulations of the Institution awarding the degrees and the Ph.D. candidates shall be exempted from the requirement of the minimum eligibility condition of "NET/SLET/SET for recruitment and appointment of Assistant Professor or equivalent positions in Universities/Colleges/Institutions subject to the fulfillment of the following conditions:

(a) Ph.D. degree of the candidate awarded to regular mode only:
(b) Evaluation of the Ph.D. thesis by at least two external examiners:
(c) Candidates had published two research papers out of which at least one in referred journal from out of his/her Ph.D. work;
(d) The candidate had presented two papers in seminars/conferences from out of his/her Ph.D. work;
(e) Open Ph.D. viva-voce of the candidate had been conducted.

(a) to (e) as above are to certified by the Vice-Chancellor/Pro-Vice Chancellor/Dean (Academic Affairs)/Dean (University Instructions)" ಎಂಬುದಾಗಿ ತಿಳಿಸಲಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿ ಮಾಡುವ ಸಂದರ್ಭದಲ್ಲಿ ಯುಜಿಸಿಯು ದಿ: 04-05-2016ರಂದು ಹೊರಡಿಸಿರುವ ಅಧಿಸೂಚನೆಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

(ಎನ್. ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).

PTO

ಸಂಖ್ಯೆ: ಕಾಶಿಇ/177/ಸುತ್ತೋಲೆ/2016-17/ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:01.10.2016.

ಮೇಲ್ಕಂಡ ಸರ್ಕಾರದ ಸುತ್ತೋಲೆಯನ್ನು ಈ ಕೆಳಗೆ ತಿಳಿಸಿರುವವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಗುಲ್ಬರ್ಗಾ.
2) ಎಲ್ಲಾ ಸರ್ಕಾರಿ/ಖಾಸಗಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.
4) ಕಛೇರಿ ಪ್ರತಿ.

A. L. Murali dhara

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

G:\Nagaraj P_NE PA _1\B.ED College Files\BES.B.Ed College Bangalore Forwadal letter.doc